



ಅರುಣ ಪಿ. ಭಟ್ಟ

## ವಾರಭವಿಷ್ಯ: 16.05.2024ರಿಂದ 22.05.2024ರವರೆಗೆ




ಉದ್ಯಮ ವ್ಯಾಪಾರ ನಡೆಸುತ್ತಿರುವವರಿಗೆ ಲಾಭವಿದೆ. ಹೊಸ ಉತ್ಸಾಹ ನಿಮ್ಮಲ್ಲಿ ಕಾಣಿಸಿಕೊಳ್ಳಲಿದೆ. ವಾರದ ಮಧ್ಯ ಭಾಗದಲ್ಲಿ ಜೀವನ ಮಟ್ಟದ ಸುಧಾರಣೆ ಬಗ್ಗೆ ಹೆಚ್ಚಿನ ಗಮನ ನೀಡಲಿದ್ದೀರಿ. ಆದರೆ ಈ ಅವಧಿಯಲ್ಲಿ ನಿಮಗೆ ನಾನಾ ಬಗೆಯ ಸವಾಲುಗಳು ಎದುರಾಗಲಿವೆ. ನಿಮ್ಮ ಸಂತೋಷದ ಕ್ಷಣಗಳಿಗೆ ಇವು ಅಡೆತಡೆಗಳಂತೆ ಅನಿಸುತ್ತವೆ. ಶುಭದಿನ 18. ಹನುಮಾನ್ ಚಾಲೀಸ್ ಪಠಿಸಿರಿ.

ಉದ್ಯೋಗ ಮತ್ತು ಸಂಘಟನೆಗೆ ಸಂಬಂಧಿಸಿದಂತೆ ಉತ್ತಮವಾದ ಪ್ರಗತಿ ಇದೆ. ಉದ್ಯೋಗ ಸ್ಥಳದಲ್ಲಿ ಮೆಚ್ಚುಗೆ ಮಾತುಗಳನ್ನು ಕೇಳಲಿದ್ದೀರಿ. ವೈಯಕ್ತಿಕ ಸಂಬಂಧದಲ್ಲಿ ಸಂಗಾತಿಯನ್ನು ಮೆಚ್ಚಿಸುವ ಸಲುವಾಗಿ ಉಡುಗೊರೆಗಳನ್ನು ನೀಡಲಿದ್ದೀರಿ. ನಂಬಿದ ವ್ಯಕ್ತಿಗಳು ವಿವಿಧ ವಿಚಾರಗಳಲ್ಲಿ ನಿಮಗೆ ಸುಳ್ಳು ಹೇಳಿದ್ದಾರೆ. ನಿಮ್ಮ ತಾಳ್ಮೆಗೆ ಉತ್ತಮ ಸ್ಪಂದನೆ ದೊರೆಯುತ್ತದೆ. ಶುಭದಿನ 21. ಗಣೇಶ ಪಂಚರತ್ನ ಪಠಿಸಿರಿ.







ವಾರದ ಆರಂಭದಲ್ಲಿ ವೃತ್ತಿ ಬದುಕಿನಲ್ಲಿ ಬೆಳವಣಿಗೆಗೆ ಅದ್ಭುತ ಅವಕಾಶಗಳಿವೆ. ನಿಮ್ಮ ಪರಿಶ್ರಮಕ್ಕೆ ತುಂಬ ವೇಗದಲ್ಲಿ ಪ್ರತಿಫಲ ದೊರೆಯಲಿದೆ. ಹಣಕಾಸು ಪರಿಸ್ಥಿತಿ ಉತ್ತಮಪಡಿಸಿಕೊಳ್ಳುವ ಅವಕಾಶ ಗೋಚರಿಸುತ್ತದೆ. ಇನ್ನು ಈ ಅವಧಿಯಲ್ಲಿ ಎಲೆಕ್ಟ್ರಾನಿಕ್ ವಸ್ತುಗಳನ್ನು ಖರೀದಿಸಲು ಮನಸ್ಸು ಮಾಡುತ್ತೀರಿ. ಈ ಹಿಂದಿಗಿಂತ ಖರ್ಚಿನ ಪ್ರಮಾಣ ಹೆಚ್ಚಿರುತ್ತದೆ. ಶುಭದಿನ 20. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.

ಉದ್ಯೋಗಸ್ಥರಿಗೆ ವಾರದ ಶುರುವಿನಲ್ಲಿ ಅನುಕೂಲವಿದೆ. ಬಡ್ತಿ ವೇತನ ಹೆಚ್ಚಳ ಆಗುವ ಸಾಧ್ಯತೆ ಇದೆ. ವೈಯಕ್ತಿಕ ಸಂಬಂಧದಲ್ಲಿ ಕಹಿ ಅನುಭವವಾಗಲಿದೆ. ಆರೋಗ್ಯಕ್ಕೆ ಸಂಬಂಧಿಸಿದಂತೆ ಅನುಕೂಲಕರ ಸಮಯ ಇದು. ಹಣಕಾಸು ವಿಚಾರದಲ್ಲಿ ವಿಶೇಷವಾದ ಪ್ರಗತಿ ಇಲ್ಲ. ಪ್ರಮುಖವಾದ ಕೆಲಸವೊಂದನ್ನು ಪೂರ್ಣಗೊಳಿಸುವುದಕ್ಕೆ ಸಮಯ ಮೀಸಲಿಡಲಿದ್ದೀರಿ. ಶುಭದಿನ 19. ಗಣಪತಿಗೆ ದೂರ್ವಾರ್ಚನೆ ಮಾಡಿರಿ.







ಉದ್ಯೋಗ ಸ್ಥಳದಲ್ಲಿ ಪ್ರಗತಿಗಾಗಿ ಭಾರೀ ಶ್ರಮ ಹಾಕಲಿದ್ದೀರಿ. ಕೆಲಸವನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸುವ ಒತ್ತಡ ಇದ್ದೇ ಇರುತ್ತದೆ. ಕೆಲವು ಕಾನೂನು ತೊಡಕುಗಳನ್ನು ಎದುರಿಸಬೇಕಾಗುತ್ತದೆ. ದೂರದ ಪ್ರಯಾಣ ಮಾಡಲು ನಿರ್ಧಾರ ಮಾಡುತ್ತೀರಿ. ಹಿರಿಯ ವ್ಯಕ್ತಿಯಿಂದ ನಿಮಗೆ ನೆರವು ದೊರೆಯಲಿದೆ. ಸಂಗಾತಿಯ ಮಾತು ಸಿಟ್ಟು ತರಿಸುತ್ತದೆ. ಶುಭದಿನ 18. ಕಾಲಭೈರವನ ಸೇವೆ ಮಾಡಿರಿ.

ಸಾಹಿತ್ಯ ಸಿನಿಮಾ, ಸೈನ್ಯ ಮತ್ತು ಭದ್ರತೆ ಕ್ಷೇತ್ರದಲ್ಲಿ ಇರುವವರಿಗೆ ಅನುಕೂಲ ಇದೆ. ಶ್ರಮಕ್ಕೆ ಅದ್ಭುತವಾದ ಅನುಕೂಲಗಳು ದೊರೆಯಲಿವೆ. ಉದ್ಯೋಗ ಬದಲಾವಣೆಗೆ ಯತ್ನಿಸುತ್ತಿರುವವರು ಇನ್ನೂ ಹೆಚ್ಚಿನ ಶ್ರಮ ಹಾಕಬೇಕು. ವ್ಯವಹಾರದಲ್ಲಿ ಉತ್ತಮ ಲಾಭ ಇದೆ. ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರಗತಿ ಇದೆ. ವೈಯಕ್ತಿಕ ಸಂಬಂಧದಲ್ಲಿ ಉಡುಗೊರೆಗಳನ್ನು ನೀಡಲಿದ್ದೀರಿ. ಶುಭದಿನ 21. ಸೌಂದರ್ಯ ಲಹರಿ ಪಠಿಸಿರಿ.







ನಿಮ್ಮ ಶ್ರಮಕ್ಕೆ ಯಶಸ್ಸು ಸಿಗಲಿದೆ. ವೃತ್ತಿ ಜೀವನದಲ್ಲಿ ನಿರೀಕ್ಷಿತ ಯಶಸ್ಸು ದೊರೆಯಲಿದೆ. ಆ ಮೂಲಕ ನಿಮ್ಮ ಕನಸನ್ನು ಈಡೇರಿಸಿಕೊಳ್ಳಲಿದ್ದೀರಿ. ಇದೇ ಮೊದಲಿಗೆ ಎಂಬಂತೆ ಉದ್ಯೋಗಕ್ಕೆ ಪ್ರಯತ್ನಿಸುತ್ತಿರುವವರು ಹೆಚ್ಚಿನ ಪರಿಶ್ರಮ ಹಾಕಬೇಕಾಗುತ್ತದೆ. ವಾರದ ದ್ವಿತೀಯಾರ್ಧದಲ್ಲಿ ಅಂದುಕೊಳ್ಳದ ರೀತಿಯಲ್ಲಿ ನಾನಾ ಕಡೆಯಿಂದ ಸಮಸ್ಯೆಗಳು ಎದುರಾಗುತ್ತವೆ. ಶುಭದಿನ 20. ಲಿಂಗಾಷ್ಟಕ ಪಠಿಸಿರಿ.

ಹೆಚ್ಚುವರಿ ಆದಾಯ ವಿಚಾರದಲ್ಲಿ ನಿಮ್ಮ ವಿವೇಚನೆಯನ್ನು ಸರಿಯಾದ ರೀತಿಯಲ್ಲಿ ಬಳಸಿ. ಗೆಳೆಯ ಗೆಳತಿಯರ ಜೊತೆ ಒತ್ತಡದ ಸನ್ನಿವೇಶವನ್ನು ಎದುರಿಸುತ್ತೀರಿ. ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವವರು ಸರಿಯಾದ ಚಿಕಿತ್ಸೆಯನ್ನು ಪಡೆಯುವುದು ಉತ್ತಮ. ವಾರದ ಮಧ್ಯ ಭಾಗಕ್ಕೆ ಬರುತ್ತಾ ಲಾಭದ ಪ್ರಮಾಣದಲ್ಲಿ ಸ್ವಲ್ಪ ಮಟ್ಟಿಗೆ ಏರಿಕೆಯಾಗುತ್ತದೆ. ಶುಭದಿನ 21. ಚಂಡಿ ಪಾರಾಯಣ ಮಾಡಿರಿ.







ಶೈಕ್ಷಣಿಕ ರಂಗದಲ್ಲಿ ಅದ್ಭುತವಾದ ಪ್ರಗತಿ. ಸಂಗಾತಿ ಜೊತೆಗೆ ಬಾಂಧವ್ಯ ಇನ್ನಷ್ಟು ಗಟ್ಟಿಯಾಗಲಿದೆ. ಹಣಕಾಸು ವಿಚಾರದಲ್ಲಿ ನಿರೀಕ್ಷಿತವಾದ ಪ್ರಗತಿ ಆಗಲಿದೆ. ಖರ್ಚಿನಲ್ಲಿ ಅನಿರೀಕ್ಷಿತವಾದ ಹೆಚ್ಚಳ ಆಗಬಹುದು. ಹಣಕಾಸು ಹೂಡಿಕೆ ವ್ಯವಹಾರದಲ್ಲಿ ಉತ್ತಮವಾದ ಪ್ರಗತಿ ಇದೆ. ವಾರದ ಅಂತ್ಯಕ್ಕೆ ಸರಿಯುತ್ತಾ ವ್ಯಾಪಾರದಲ್ಲಿ ಲಾಭ ಗಳಿಸುವ ಅವಕಾಶ ಹೆಚ್ಚಲಿದೆ. ಶುಭದಿನ 19. ದತ್ತ ಗುರುಚರಿತ್ರೆ ಪಠಿಸಿರಿ.

ನಿಮಗೆ ಈಗಿರುವ ಗ್ರಹಗತಿಗಳನ್ನು ಗಮನಿಸಿದರೆ ಸಂಸ್ಥೆಯೊಂದರ ಜೊತೆ ಒಪ್ಪಂದ ಸಾಧ್ಯತೆಗಳಿವೆ. ವ್ಯಾಪಾರ ಉದ್ಯಮವನ್ನು ವಿಸ್ತರಿಸಲು ವಿಶಿಷ್ಟ ಅವಕಾಶಗಳು ದೊರೆಯಬಹುದು. ಸ್ಪರ್ಧಾತ್ಮಕ ಕ್ಷೇತ್ರದಲ್ಲಿ ಉತ್ತಮವಾದ ಪ್ರಗತಿ ಇದೆ. ವೈಯಕ್ತಿಕ ಸಂಬಂಧದಲ್ಲಿ ಭಿನ್ನಾಭಿಪ್ರಾಯಗಳು ಇದ್ದಲ್ಲಿ ನಿವಾರಿಸಿಕೊಳ್ಳಲು ಸೂಕ್ತ ಸಮಯ. ನಿಮ್ಮ ಹಣಕಾಸು ಅಗತ್ಯ ಹೆಚ್ಚಾಗಲಿದೆ. ಶುಭದಿನ 17. ನವಗ್ರಹ ಆರಾಧನೆ ಮಾಡಿರಿ.







ವಾರದ ಶುರುವಿನಲ್ಲಿ ವರ್ಚಸ್ಸು ವೃದ್ಧಿಯಾಗಲಿದೆ. ವೃತ್ತಿ ಕ್ಷೇತ್ರದಲ್ಲಿ ಉತ್ತಮ ಪ್ರಗತಿ ಇದೆ. ವೈದ್ಯಕೀಯ ಕ್ಷೇತ್ರದಲ್ಲಿ ಇರುವವರಿಗೆ ಪದೋನ್ನತಿ ದೊರೆಯಬಹುದು. ಇದರಿಂದ ನಿಮ್ಮ ಉತ್ಸಾಹ ಹೆಚ್ಚಾಗಲಿದೆ. ಸೋದರ ಸೋದರಿ ಜೊತೆಗಿನ ಬಾಂಧವ್ಯ ಗಟ್ಟಿಯಾಗಲಿದೆ. ವಾರದ ಮಧ್ಯ ಭಾಗದಲ್ಲಿ ಜೀವನಶೈಲಿಯಲ್ಲಿ ಬದಲಾವಣೆ ಮಾಡಿಕೊಳ್ಳಲಿದ್ದೀರಿ. ಶುಭದಿನ 22. ವಿಷ್ಣು ಸಹಸ್ರನಾಮ ಮಾಡಿರಿ.

ವಾರದ ಶುರುವಿನಲ್ಲಿ ಕಟ್ಟಡ ನಿರ್ಮಾಣ ಕಾರ್ಯದಲ್ಲಿ ತೊಡಗುವ ಸಾಧ್ಯತೆ ಇದೆ. ಉದ್ಯೋಗ ವಿಚಾರವಾಗಿ ದೂರ ಪ್ರಯಾಣ ಮಾಡಬೇಕಾಗುತ್ತದೆ. ಆರೋಗ್ಯದಲ್ಲಿ ಸಮಸ್ಯೆ ಎದುರಾಗಬಹುದು. ಭದ್ರತೆಗೆ ಸಂಬಂಧಿಸಿದ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಅತ್ಯುತ್ತಮವಾದ ಪ್ರಗತಿ ಇದೆ. ಸಂಗಾತಿ ಜೊತೆಗೆ ಮನಸ್ತಾಪ ಏರ್ಪಡಬಹುದು. ಶುಭದಿನ 19. ಶ್ರೀರಾಮರಕ್ಷಾ ಸ್ತೋತ್ರ ಪಠಿಸಿರಿ.

